Tumbe International e-Magazine
ISSN : 2581-7728
A Multilanguage Magazine
Issue-1
Volume-4
Jan-June: 2021

# ಕನ್ನಡಿ ಮಾತನಾಡಲಿಲ್ಲ!

**ಶ್ರೀವಿದ್ಯಾ ಎ**
(Shreevidya A)
Student- 1st M.Sc. Physics
Mangalore University, Mangalagangotri, Konaje, Mangalore.
Valachil padav, Farangipete, Mangalore.
ashreevidya97@gmail.com Mobile: 9448028127

ಹೊಸದೊಂದು ಕನ್ನಡಿ

ಮನೆಯ ಗೋಡೆಯನೇರಿತು,

ಹೊಸ ಮನದ ಹಸುಳೆಯಲಿ

ತುಸು ಮಂದಹಾಸವನೆರಚಿತು

ಕನ್ನಡಿ ನಕ್ಕಿತು ಎಳಸು ಮುಗ್ಧತೆಯ ಕಂಡು,

ಮೀಸೆ ತಿರುವಿತು ಸಾಧನೆಗಳ ವರ್ಚಸ್ಸ ಕಂಡು,

ಪ್ರತಿಫಲಿಸುವುದಂತೆ, ಅಥವಾ ಜೊತೆಗೂಡುವುದೋ?

ಏನೋ ಒಂದು ; ಜೀವನಕೇ ಅಂಟಿತ್ತು.

ಕನ್ನಡಿಯ ಬಣ್ಣಗಳು ನನ್ನ ಮುಖದ ಮೇಲಿತ್ತು!

ಕಣ್ಣೀರ ಕಂಡು ಕನ್ನಡಿ ಬೆನ್ನ ಸವರಿತ್ತು,

ನೋವುಗಳ ದಾರಿ ಕಂಡು ಕಾಲು ಹೆಜ್ಜೆ ಕಿತ್ತಾಗ,

ಕಣ್ಣೀರು ಸತ್ತಿತ್ತು, ಕನ್ನಡಿ ಸಾಯಲಿಲ್ಲ..

ಅದೇನನೋ ಗೊಣಗುತ್ತಿತ್ತು, ಕೇಳಬೇಕಲ್ಲವೇ?

ಅಸಡ್ಡೆ! , ಕನ್ನಡಿ ಮಾತಾಡುವುದೇ?!

ಬಹುದೂರಕೆ ಕಾಲು ಸವೆಸಿ,

ಮನೆಗೆ ಹಿಂತಿರುಗಿದ ನನ್ನ ಹೆಜ್ಜೆಗಳು

ಕನ್ನಡಿಯ ಕಂಡು " ಹಲೋ " ಎಂದವು.

ಕನ್ನಡಿ ಮರುಧ್ವನಿಸಲಿಲ್ಲ !

ಬೆನ್ನು ತೋರಿಸಿದೆ, ಒರೆಗಣ್ಣು ಬೆವತಿತ್ತು,

ಕನ್ನಡಿ ಹಿಂಬಾಲಿಸುತ್ತಲೇ ಇತ್ತು!!